



**ಶಾಪಿಂಗ್**

ಪತಿ: ನಾಲ್ಕು ಗಂಟೆಗಳಿಂದ ಎಲ್ಲಿ ಮಾಯವಾಗಿದ್ದೆ?

ಪತ್ನಿ: ಶಾಪಿಂಗ್ ಸಲುವಾಗಿ ಮಾಲ್‌ಗೆ ಹೋಗಿದ್ದೆ...

ಪತಿ: ಏನೇನು ಕೊಂಡ್ಕೊಂಡೆ?

ಪತ್ನಿ: ಒಂದು ಹೇರ್ ಬ್ಯಾಂಡ್, 45 ಸೆಲ್ಫೀ ತೆಗೆದುಕೊಂಡೆ...!

★★★

**ಸಂಕೇತ**

ವೈವಾಹಿಕ ಜೀವನದ 5 ವರ್ಷಗಳ ಬಳಿಕ ಗೋಪಿ ವ್ಯಾಲೆಂಟೈನ್ ಡೇ ಯಂದು ಪತ್ನಿ ರತ್ನಾಳಿಗೆ ಒಂದು ಬಿಳಿ ಗುಲಾಬಿ ತಂದಿತ್ತ.

ರತ್ನಾ: ಇದೇನು ಬಿಳಿ ಗುಲಾಬಿ, ವ್ಯಾಲೆಂಟೈನ್ ಡೇ ಯಂದು ಕೆಂಪು ಗುಲಾಬಿ ನೀಡುವುದು ಸಂಪ್ರದಾಯವಲ್ಲವೆ?

ಗೋಪಿ: ನನಗೀಗ ಜೀವನದಲ್ಲಿ ಪ್ರೀತಿಗಿಂತ ಅಧಿಕವಾಗಿ ಶಾಂತಿಯ ಅವಶ್ಯಕತೆಯಿದೆ...!

★★★

**ವಿಚಾರಣೆ**

ಕುಡುಕನೋರ್ವ ಮನೆಯ ಮಹಡಿಯ ಛಾವಣಿಯಿಂದ ಕೆಳಕ್ಕೆ ಬಿದ್ದ....

ಅಕ್ಕ ಪಕ್ಕದ ಜನರೆಲ್ಲಾ ಜಮಾಯಿಸಿ ವಿಚಾರಿಸಿದರು, 'ಏನಾಯಿತು, ಏನಾಯಿತು...?'

ಕುಡುಕ: ಗೊತ್ತಿಲ್ಲ ಸ್ವಾಮೀ... ನಾನೂ ಈಗ ತಾನೆ ಕೆಳಕ್ಕಿಳಿದು ಬಂದೆ...!'

★★★

**ಪರಿಹಾರ?**

ಹುಡುಗಿಯರಿಬ್ಬರು ಬಸ್ಸಿನಲ್ಲಿ ಖಾಲಿಯಿದ್ದ 1 ಸೀಟಿಗಾಗಿ ಕಿತ್ತಾಡುತ್ತಿದ್ದರು.

ಇದನ್ನು ಗಮನಿಸಿದ ನಿರ್ವಾಹಕನೆಂದ, 'ಜಗಳವಾಡಬೇಡಿ, ಯಾರು ವಯಸ್ಸಿನಲ್ಲಿ ದೊಡ್ಡವರೋ ಅವರು ಆಸೀನರಾಗಿ...'

ಆನಂತರ ಪ್ರಯಾಣದುದ್ದಕ್ಕೂ ಹುಡುಗಿಯರು, 'ನೀನು ಕೂತ್ಕೊಳ್ಳಕ್ಕಾ... ನೀನು ಕೂತ್ಕೊಳ್ಳಕ್ಕಾ...' ಎಂದು ಗೋಗರೆಯುತ್ತಿದ್ದರು!

(ಸಂಗ್ರಹ): **ರಮಣ್‌ಶೆಟ್ಟಿ ರೆಂಜಾಳ್, ಮುಂಬೈ**

**ಆಳು**

ಮನೆಯೊಡತಿ: (ಕೆಲಸದವಳಿಗೆ) ತೋಟದ ಆಳಿನ ಮೇಲೆ ಒಂದು ಕಣ್ಣಿಟ್ಟಿರು.

ಕೆಲಸದಾಕೆ: ಒಂದು ಕಣ್ಣೇನ್ರಮ್ಮಾ– ಎರಡು ಕಣ್ಣುಗಳನ್ನು ಇಟ್ಟಿದ್ದೇನೆ; ಆತ ಒಪ್ಪಿದರೆ ಲಗ್ನವನ್ನೂ ಆಗುತ್ತೇನೆ!

★★★

**ಕುದುರೆ ಸವಾರಿ**

ಶಂಕರ: ಒಂದು ತಿಂಗಳು ರಜೆ ಹಾಕಿ ಊರಿಗೆ ಹೋಗಿದ್ದೆಯಲ್ಲಾ, ಕಾಲ ಹೇಗೆ ಕಳೆದೆ?

ದಿವಾಕರ: ಮೊದಲನೆಯ ದಿನ ಕುದುರೆ ಸವಾರಿ ಮಾಡಿದೆ; ಮಾರನೆಯ ದಿನದಿಂದ ರಜಾ ಮುಗಿಯುವವರೆಗೂ ಆಸ್ಪತ್ರೆಯಲ್ಲಿ ಕಳೆದೆ!

(ಸಂಗ್ರಹ): **ಎ.ಕೆ. ಪಟ್ಟಾಭಿ, ಬೆಂಗಳೂರು**

ಗುಂಡ: ನೀನು ಕುರುಡನಾಗಿದ್ದರೆ ಜನರು ನಿನಗೆ ಹೆಚ್ಚು ಭಿಕ್ಷೆ ಹಾಕುತ್ತಿದ್ದರು.

ಭಿಕ್ಷುಕ: ಅಯ್ಯೋ ನಾನಾಗಲೇ ಕುರುಡ ಭಿಕ್ಷುಕನಂತೆ ನಟಿಸಿದ್ದೆ ಸಾರ್! ಆದರೆ ಜನರು ನಕಲಿ ನಾಣ್ಯಗಳನ್ನು ನನ್ನ ತಟ್ಟೆಗೆ ಹಾಕುತ್ತಿದ್ದರು.

★★★

ವಾಣಿ: ನೀನು ಇಷ್ಟು ಚಿಕ್ಕ ಸ್ಕರ್ಟ್ ಹಾಕಿಕೊಂಡು ಬಂದಿರೋದು ನಿಮ್ಮಮ್ಮನಿಗೆ ಗೊತ್ತಾದರೆ ಬಯ್ಯೊದಿಲ್ವಾ?

ರಾಣಿ: ಬರಿ ಬಯ್ಯೋದಾ? ನಾನು ಹೀಗೆ ಅವರ ಸ್ಕರ್ಟ್ ಹಾಕಿಕೊಂಡು ಬಂದಿರೋದು ಗೊತ್ತಾದರೆ ನನ್ನ ಕಥೆ ಮುಗಿಸಿಬಿಟ್ಟಾರು.

★★★

ತಂದೆ: ಲೋ ಮಗನೇ ನಿನ್ನ ಬಗ್ಗೆ ನಿನ್ನ ಟೀಚರ್ ಕಂಪ್ಲೇಂಟ್ ಬರೆದು ಕಳ್ಸಿದಾರಲ್ಲೋ?

ಮಗ: ಅದೆಲ್ಲಾ ಶುದ್ಧ ಸುಳ್ಳು.

ತಂದೆ: ಅದು ಹೇಗೆ ಹೇಳ್ತೀಯಾ?

ಮಗ: ಹೇಗೆ ಅಂದ್ರೆ ನಾನು ಹದಿನೈದು ದಿನಗಳಿಂದ ಸ್ಕೂಲಿಗೇ ಹೋಗಿಲ್ಲ.

★★★



ಇಂಟರ್‌ವ್ಯೂಗೆ ಹೋಗಿದ್ದ ಮಂಟಾ ಮನೆಗೆ ಕುರ್ಚಿಯೊಂದನ್ನು ಹಿಡಿದುಕೊಂಡು ಬಂದಿದ್ದ.

ಅವನ ಹೆಂಡತಿ: 'ಇದೇನ್ರೀ? ಎಲ್ಲಾ ಬಿಟ್ಟು ಈಗ ಕುರ್ಚಿ ಯಾಕೆ ತಂದಿದ್ದೀರಿ?' ಎಂದು ಕೇಳಿದಳು.

ಮಂಟಾ: ಸಂದರ್ಶಕರು ನನಗೆ 'ಪ್ಲೀಸ್ ಟೇಕ್ ಯುವರ್ ಸೀಟ್' ಅಂದರು. ಅದಕ್ಕೆ ತಂದೆ.

(ಸಂಗ್ರಹ): **ಎಂ.ಕೆ. ಮಂಜುನಾಥ್, ಬೆಂಗಳೂರು**



ವಶೀಕರಣದಲ್ಲಿ ಚಾಲೆಂಜ್



ವ್ಯಾಪಾರ, ಶತ್ರುನಾಶ, ವಶೀಕರಣಗಳಿಗೆ ಸ್ಪೆಷಲಿಸ್ಟ್ ಜ್ಯೋತಿಷ್ಯರು

ಪ್ರಖ್ಯಾತ ಕಾಶಿ ಗುರುಗಳಾದ ದೇವಿ ಭಕ್ತ, ಅಘೋರಿನಾಥ್ ರವರ ಆತ್ಮೀಯ ಶಿಷ್ಯರಾದ ಮಾಂತ್ರಿಕ ಶ್ರೀ ಎನ್. ಲಕ್ಷ್ಮಣ ರಾವ್ ಇವರು ಸತತ 25 ವರ್ಷಗಳ ಕಠೋರ ಸಾಧನೆಯಿಂದ ನಾಗ ಅಘೋರಿಗಳ ಕೇರಳದ ಸರ್ವಮಂತ್ರ ವಿದ್ಯೆಗಳನ್ನು ಸಿದ್ಧಿಪಡಿಸಿಕೊಂಡು ತಮ್ಮ ವಶದಲ್ಲಿ ಇರಿಸಿಕೊಂಡಿದ್ದಾರೆ.

ಇವರು ನಿಮ್ಮ ಭವಿಷ್ಯ, ಉದ್ಯೋಗ, ವ್ಯಾಪಾರ, ವಿವಾಹ, ಸಂತಾನ, ಆರ್ಥಿಕ, ದಾಂಪತ್ಯ ಕಲಹ, ವಿದ್ಯೆ, ಮಾಟಮಂತ್ರ, ಆರೋಗ್ಯ, ಸಂಪತ್ತು, ಮನಃಶಾಂತಿ, ಶತ್ರುನಾಶ, ಸ್ತ್ರೀ ವಶೀಕರಣ, ಪುರುಷ ವಶೀಕರಣ, ಜನವಶೀಕರಣ, ಲಕ್ಷ್ಮೀವಶೀಕರಣ, ಶತ್ರು ವಶೀಕರಣ ಇನ್ನು ಯಾವುದೇ ಕಠಿಣ ಸಮಸ್ಯೆಗಳಿಗೆ ಕೆಲವೇ ದಿನದಲ್ಲಿ ಪರಿಹಾರ ಶತಸಿದ್ಧ. ನಿಮ್ಮೆಲ್ಲಾ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು.

ಶ್ರೀ ರಾಘವೇಂದ್ರ ಸ್ವಾಮಿ ಜ್ಯೋತಿಷ್ಯಂ

ಪಂ: ಶ್ರೀ ಎನ್.ಲಕ್ಷ್ಮಣ್‌ರಾವ್

ಗೋಲ್ಡನ್ ಆರ್ಕೇಡ್, 1ನೇ ಮಹಡಿ, ಎಂಪೆಯರ್ ಮಾಲ್ ಎದುರುಗಡೆ, ಎಮ್. ಜಿ. ರೋಡ್, ಕೊಡಿಯಾಲ್‌ಬೈಲ್, ಮಂಗಳೂರು.

9900998178

ನೇರವಾಗಿ ಭೇಟಿಯಾಗಲು ಅನುಕೂಲ ಇಲ್ಲದವರು ಫೋನ್ ಅಥವಾ ಪತ್ರದ ಮೂಲಕ ವ್ಯವಹರಿಸಬಹುದು